# ಕರ್ನಾಟಕ ವಿಧಾನ ಪರಿಷತ್ತು

1 ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1060
2 ಸದಸ್ಯರ ಹೆಸರು : ಡಾ॥ ಕೆ. ಗೋವಿಂದರಾಜ್
(ವಿಧಾನಸಭೆಯಿಂದ ಚುನಾಯಿತರಾದವರು)
3 ಉತ್ತರಿಸುವ ದಿನಾಂಕ : 22-09-2022
4 ಉತ್ತರಿಸುವವರು : ಮುಖ್ಯಮಂತ್ರಿಗಳು

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯು ಖಾಸಗಿ / ಸಾರ್ವಜನಿಕ ಸಹಭಾಗಿತ್ವದಲ್ಲಿ ನಿರ್ಮಿಸಿರುವ ಬಹುತೇಕ ಬಸ್ ತಂಗುದಾಣಗಳ ನಿರ್ವಹಣೆ ಕೊರತೆಯಿಂದ ದುಸ್ಥಿತಿಗೆ ತಲುಪಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಪಾಲಿಕೆ ವತಿಯಿಂದ ಸಾರ್ವಜನಿಕ ಖಾಸಗಿ ಸಹಭಾಗಿತ್ವದಲ್ಲಿ ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯಿಂದ ಸೂಚಿಸಿರುವ ಸ್ಥಳಗಳಲ್ಲಿ ಬಸ್ ತಂಗುದಾಣಗಳನ್ನು ನಿರ್ಮಿಸಲಾಗಿರುತ್ತದೆ. ಬಸ್ ತಂಗುದಾಣಗಳ ನಿರ್ವಹಣೆಯನ್ನು ಸಂಬಂಧಪಟ್ಟ ಖಾಸಗಿ ಸಂಸ್ಥೆಯವರೇ ನಿರ್ವಹಿಸುತ್ತಿದ್ದು, ಬಿ.ಬಿ.ಎಂ.ಪಿ. ವತಿಯಿಂದ ನಿಗಾವಹಿಸಲಾಗಿರುತ್ತದೆ. |
| ಆ) | ಬಸ್ ತಂಗುದಾಣಗಳ ಸೂರು ಕಿತ್ತುಹೋಗಿ ಸೋರುತ್ತಿದ್ದು, ಪ್ರಯಾಣಿಕರು ಮಳೆ ಬಂದಾಗ ಪರದಾಡುವಂತಾಗುತ್ತಿದ್ದು, ಇವು ಪ್ರಯಾಣಿಕ ಸ್ನೇಹಿಯಾಗಿರದೆ, ಜಾಹೀರಾತು ಪ್ರದರ್ಶನಕ್ಕಷ್ಟೇ ಸೀಮಿತವಾಗಿ, ಇನ್ನೂ ಕೆಲ ಶೆಲ್ಟರ್‌ಗಳಲ್ಲಿ ಆಸನಗಳೇ ಇಲ್ಲದೆ ಕೆಲ ತಂಗುದಾಣಗಳು ಕುಡುಕರು, ಭಿಕ್ಷುಕರು ಹಾಗೂ ಪುಂಡಪೋಕರಿಗಳ ಅಡ್ಡಗಳಾಗಿ ಬಸ್ ತಂಗುದಾಣಗಳಲ್ಲಿ ವಿದ್ಯುತ್ ದೀಪಗಳಿಲ್ಲದೆ ಪ್ರಯಾಣಿಕರು ಭಯದಿಂದಲೇ ಬಸ್‌ಗಾಗಿ ಕಾಯುವ ಅನಿವಾರ್ಯತೆ ಎದುರಾಗಿದ್ದು, ಈ ಎಲ್ಲಾ ಸಮಸ್ಯೆಗಳ ಬಗ್ಗೆ ಸರ್ಕಾರ ಏನು ಕ್ರಮ ತೆಗೆದುಕೊಂಡಿದೆ ? (ವಿವರಗಳನ್ನು ಒದಗಿಸುವುದು) | ಸಾರ್ವಜನಿಕ ಖಾಸಗಿ ಸಹಭಾಗಿತ್ವದಲ್ಲಿ ನಿರ್ಮಿಸಲಾಗಿರುವ ಬಸ್ ತಂಗುದಾಣಗಳ ನಿರ್ವಹಣೆಯನ್ನು ಖಾಸಗಿ ಸಂಸ್ಥೆಯವರೇ ನಿರ್ವಹಿಸುತ್ತಿರುತ್ತಾರೆ. ನಿರ್ವಹಣಾ ಅವಧಿಯಲ್ಲಿ ಖಾಸಗಿ ಸಂಸ್ಥೆರವರು ಜಾಹೀರಾತು ಪ್ರದರ್ಶನ ಮಾಡುತ್ತಿದ್ದು, ಆಗಿಂದಾಗ್ಗೆ ಬಸ್ ತಂಗುದಾಣಗಳ ನಿರ್ವಹಣೆಯನ್ನು ಮಾಡುತ್ತಿರುತ್ತಾರೆ. ಸಾರ್ವಜನಿಕ ಖಾಸಗಿ ಸಹಭಾಗಿತ್ವದಲ್ಲಿ ನಿರ್ಮಿಸಲಾಗಿರುವ ಎಲ್ಲಾ ತಂಗುದಾಣಗಳಲ್ಲಿ ಆಸನಗಳ ವ್ಯವಸ್ಥೆಯನ್ನು ಕಲ್ಪಿಸಲಾಗಿರುತ್ತದೆ ಹಾಗೂ ಸದರಿ ಬಸ್ ತಂಗುದಾಣದ ಬಗ್ಗೆ ವಿಶಿಷ್ಟ ವಿವರಣೆಯಂತೆ ಕ್ರಮ ವಹಿಸಲಾಗುತ್ತಿರುತ್ತದೆ. |

**ಸಂಖ್ಯೆ: ಸಅಇ 789 ಎಂಎನ್‌ವೈ 2022 (ಇ)**

(ಬಸವರಾಜ ಬೊಮ್ಮಾಯಿ)
ಮುಖ್ಯಮಂತ್ರಿ